ಈ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಿಂದ ಯಾವ ಆದೇಶವು ಬಂದಿಲ್ಲ.

ಉ. ಉದ್ಭವಿಸುವುದಿಲ್ಲ.

ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಮತ್ತು ನೇಸರಗಿ ಎ.ಪಿ.ಎಂ.ಸಿ. ಯಾರ್ಡ್‌ಗಳ ಅಭಿವೃದ್ಧಿ

(2146): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಮತ್ತು ನೇಸರಗಿ ಎ.ಪಿ.ಎಂ.ಸಿ. ಯಾರ್ಡ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಆ. ಈ ಎರಡು ಮಾರುಕಟ್ಟೆ ಯಾರ್ಡ್‌ಗಳಿಗಾಗಿ ವಶಪಡಿಸಿಕೊಳ್ಳಲಾಗಿರುವ ಜಮೀನಿನ ವಿಸ್ತೀರ್ಣವೆಷ್ಟು;

ಇ. ಈ ಮಾರುಕಟ್ಟೆ ಯಾರ್ಡ್‌ಗಳು ಪ್ರಾರಂಭವಾಗದೇ ಇರುವುದರಿಂದ ಹೆಚ್ಚಿಗೆ ಬೆಳೆಯುತ್ತಿರುವ ಕಾಯಿಪಲ್ಲೆಗಳನ್ನು ಮಾರಾಟ ಮಾಡಲು ಮಾರ್ಕೆಟ್ ಯಾರ್ಡ್ ಇಲ್ಲದಿರುವುದರಿಂದ ಅವುಗಳು ಬೇರೆ ಜಿಲ್ಲೆಗಳಿಗೆ ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ. ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):–

ಅ. ಬೆಳಗಾಂ ಜಿಲ್ಲೆಯ ಬೈಲಹೊಂಗಲ ಮಾರುಕಟ್ಟೆ ಕ್ಷೇತ್ರದಲ್ಲಿ ದೊಡ್ಡವಾಡ ಮತ್ತು ನೇಸರಗಿ ಇವುಗಳು ಉಪ ಮಾರುಕಟ್ಟೆಗಳಾಗಿದ್ದು, ದೊಡ್ಡವಾಡ ಉಪಮಾರುಕಟ್ಟೆ ಪ್ರಾಂಗಣಕ್ಕಾಗಿ ಜಮೀನು ಇಲ್ಲದಿರುವುದರಿಂದ ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ.

ನೇಸರಿಗಿ ಉಪ ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದ್ದು, ಈಗಾಗಲೇ ಈ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕಛೇರಿ – ವ – ಗೋದಾಮು, ಎನ್.ಜಿ.ಆರ್.ಜಿ. ಗೋದಾಮು (2) ಮತ್ತು ಕಾಂಪೌಂಡ್ ಗೋಡೆ ಈ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಆ. ದೊಡ್ಡವಾಡ ಉಪ ಮಾರುಕಟ್ಟೆಗೆ ಜಮೀನು ಇರುವುದಿಲ್ಲ. ನೇಸರಗಿ ಉಪಮಾರುಕಟ್ಟೆ ಪ್ರಾಂಗಣಕ್ಕಾಗಿ 14 ಎಕರೆ 12 ಗುಂಟೆ ಜಮೀನು ವಶಪಡಿಸಿಕೊಳ್ಳಲಾಗಿದೆ.

ಇ. ಸದ್ಯಕ್ಕೆ ಈ ಮಾರುಕಟ್ಟೆ ಕ್ಷೇತ್ರದಲ್ಲಿ ಕಾಯಿಪಲ್ಲೆಗಳನ್ನು ನಿಯಂತ್ರಣ ಕಕ್ಷೆಗೆ ಒಳಪಡಿಸಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನ ವತಿಯಿಂದ ಸರ್ಕಾರಿ ಪದವಿಪೂರ್ವ ಕಾಲೇಜಿನ ಹತ್ತಿರ ಶೌಚಾಲಯಗಳ ಕಟ್ಟಡ

(2173): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹತ್ತಿರ, ಸರ್ಕಾರಿ ಹೈಸ್ಕೂಲ್

ಹತ್ತಿರ ಮತ್ತು ಕನ್ನಡ ಶಾಲೆಯ ಹತ್ತಿರ ಮೂತ್ರಾಲಯ ಹಾಗೂ ಶೌಚಾಲಯಗಳು ಇಲ್ಲದೆ ಇರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಇವುಗಳನ್ನು ಕಟ್ಟಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿರುವರು;

ಇ. ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಶಾಲೆಗಳಲ್ಲಿ ಇವುಗಳನ್ನು ಈಗಾಗಲೇ ಕಟ್ಟಲಾಗಿದೆ ಮತ್ತು ಇನ್ನು ಎಷ್ಟು ಶಾಲೆಗಳಲ್ಲಿ ಇವುಗಳನ್ನು ಈಗಾಗಲೇ ಕಟ್ಟಲಾಗಿದೆ ಮತ್ತು ಇನ್ನು ಎಷ್ಟು ಶಾಲೆಗಳಲ್ಲಿ ಕಟ್ಟಬೇಕಾಗಿದೆ ? (ತಾಲ್ಲೂಕುವಾರು ವಿವರ ಕೊಡುವುದಾಗಬೇಕು);

ಈ. ಇವುಗಳನ್ನು ಕಟ್ಟಲು ಎಷ್ಟು ಹಣ ಬೇಕಾಗುವುದು ಮತ್ತು ಇವುಗಳನ್ನು ಕಟ್ಟಲು ಸರ್ಕಾರದವರು ಹಣವನ್ನು ಒದಗಿಸಲು ಕ್ರಮ ಕೈಗೊಳ್ಳುವರೇ;

ಉ. ಜಿಲ್ಲಾ ಪರಿಷತ್ತಿನವರು ಈ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಲು ರೂ. 1500-00 ಗಳನ್ನು ಒದಗಿಸಿರುವರು. ಅಷ್ಟು ಹಣದಲ್ಲಿ ಮೂತ್ರಾಲಯಗಳನ್ನು ಹಾಗೂ ಶೌಚಾಲಯಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲ ಎನ್ನುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಪ್ರತಿಯೊಂದು ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಲು ಕನಿಷ್ಠ ರೂ. 5000-00ಗಳನ್ನು ಒದಗಿಸಿದರೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಆ. ಮತ್ತು ಆ. ಇಲ್ಲ.

ಪದವಿ ಪೂರ್ವ ಕಾಲೇಜು ಸರ್ಕಾರಿ ಹೈಸ್ಕೂಲ್ ಮತ್ತು ಕನ್ನಡ ಶಾಲೆಗಳ ಹತ್ತಿರ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟುವ ಯೋಜನೆ ಇರುವುದಿಲ್ಲ.

ಇ. 1986-87 ಮತ್ತು 1988-89ರ ಸಾಲಿನಲ್ಲಿ ಗ್ರಾಮೀಣ ಭೂರಹಿತ ಉದ್ಯೋಗ ಉತ್ಪಾದನೆ ಯೋಜನೆಯಡಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ 146 ಸಂಖ್ಯಿಕ ಶೌಚಾಲಯಗಳನ್ನು ಕಟ್ಟಲಾಗಿದೆ. ಈ ಕಾರ್ಯಕ್ರಮ ಈಗ ವಾಡಿಕೆಯಲ್ಲಿಲ್ಲ.

ಈ. ಮತ್ತು ಉ. ವಿದ್ಯಾ ಸಂಸ್ಥೆಗಳಿಗೋಸ್ಕರ ಶೌಚಾಲಯ ಹಾಗೂ ಮೂತ್ರಾಲಯಗಳನ್ನು ನಿರ್ಮಿಸುವ ವಿಷಯವನ್ನು ಪುನರ್ ಪರಿಶೀಲಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಹತ್ತಿರ ಕೊಳವೆ ಬಾವಿ

(2174): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಹತ್ತಿರ ಹಾಗೂ ಕಾಂಪೋಜಿಟ್ ಜೂನಿಯರ್ ಕಾಲೇಜುಗಳ ಹತ್ತಿರ ಮತ್ತು ಶಾಲೆಗಳ ಹತ್ತಿರ ಎಷ್ಟು ಕೊಳವೆ ಬಾವಿಗಳನ್ನು ವಿದ್ಯಾರ್ಥಿಗಳ ಅನುಕೂಲತೆಗಾಗಿ ತೋಡಿಸಲಾಗಿದೆ (ತಾಲ್ಲೂಕುವಾರು ವಿವರ ಕೊಡುವುದು);

2. ಒಂದು ವೇಳೆ ಇನ್ನೂವರೆಗೂ ಕೊಳವೆ ಬಾವಿಗಳನ್ನು ತೋಡದೆ ಇದ್ದಲ್ಲಿ ಸರ್ಕಾರದವರು ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳುವರೇ;